# ನವಿಲುಗನ್ನಡಿ

- ಸುಂದರ ಮುಖಪುಟದೊಂದಿಗೆ ಜೂನ್ ತಿಂಗಳ ಮಯೂರ ಮೆಚ್ಚುಗೆಯಾಯಿತು. ಮಳೆ, ಮಣ್ಣಿನ ಮೇಲಷ್ಟೇ ಅಲ್ಲ, ಮೈ ಮನಗಳ ಮೇಲೂ ಪ್ರಭಾವ ಬೀರುತ್ತದೆಂಬುದನ್ನು ಸಾರುವಂತಿದೆ. ಕರಾವಳಿ ಪ್ರದೇಶದಲ್ಲಂತೂ, ಬೇಸಿಗೆಯ ಬಿಸಿಲಿನ ಬೇಗೆಯಿಂದ ಬೆಂದವರಿಗೆ ಈಗಷ್ಟೇ ಬೀಳುತ್ತಿರುವ ತುಂತುರ ಹನಿ ಜೀವನೋತ್ಸಾಹವನ್ನೇ ಹೆಚ್ಚಿಸುತ್ತಿದೆ. ಇದು ಹೀಗೇ ಎಡೆಬಿಡದೇ ಸುರಿದರೆ ಕಠೋರ ರೂಪ ತಾಳುತ್ತದೆ ಎಂಬುದೂ ನಿಜ.

**ಶಂಕರನಾರಾಯಣ ಭಟ್, ಮಾಡಗೇರಿ**

- 'ಮೊದಲ ಅನುವಾದ ಮತ್ತು ಮೂರು ಬೆತ್ತದ ಏಟುಗಳು!' ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪುರಸ್ಕಾರಕ್ಕೆ ಪಾತ್ರರಾದ ಕೆ.ಕೆ. ಗಂಗಾಧರನ್ ಮಾತುಗಳು, ಹಿಂದಿನ ಮತ್ತು ಇಂದಿನ ಶಿಕ್ಷಣ ಪದ್ಧತಿಯ ಮೇಲೆ ಬೆಳಕು ಚಲ್ಲುವಂತಿವೆ. ಗಂಗಾಧರನ್ ಅವರ ಮನದಾಳದ ಮಾತುಗಳು ಸೊಗಸಾಗಿ ಮೂಡಿಬಂದಿವೆ.

**ಕಾವ್ಯಾ ಎಚ್.ಎಸ್.**

- 'ಕಾಡಿಗೆ ಕಣ್ಣು' ಕಲೀಮ್ ಉಲ್ಲಾ ಅಂಕಣ ಓದುವುದೆಂದರೆ ಸಿನಿಮಾ ನೋಡಿದ ಅನುಭವ... ಕಾಡಿನ ಕಥನವನ್ನು ಕಣ್ಣಿಗೆ ಕಟ್ಟುವಂತೆ ಪ್ರಸ್ತುತಪಡಿಸುವ ಅವರ ಬರಹಗಳ ಸೊಗಸೇ ಬೇರೆ.

**ಅನುಪಮಾ ವಿ.ಎಸ್., ಧಾರವಾಡ**

- ಕಥೆಗಳೆಲ್ಲವೂ ಸೊಗಸಾಗಿದ್ದವು. 'ಮನೆ', 'ಅವು ಅಂಗೇ', 'ಆಥರ್ಸ್ ಕಾಪಿ' ಒಂದಕ್ಕಿಂತ ಒಂದು ಚೆನ್ನಾಗಿದ್ದು, ಬಹುತೇಕ ಎಲ್ಲಾ ಕಥೆಗಳ ನಾಯಕ ಅಥವಾ ನಾಯಕಿಯರು ಶೋಷಣೆಗೆ ಒಳಗಾಗುವ ಕಥಾವಸ್ತು ಸಾಮಾನ್ಯವೆನಿಸಿತು. ಲಲಿತಾ ಸಿದ್ಧಬಸವಯ್ಯ ಅವರ ಕವಿತೆ 'ರಖಾವು' ಬಹಳಷ್ಟು ಸಾರಿ ಮೆಲಕು ಹಾಕುವಂತಿತ್ತು. ಚಲನಚಿತ್ರ ನೋಡಿದ ಅನುಭವವಾಯಿತು.

**ಆದಿವಾಲ ಗಂಗಮ್ಮ,ಬೆಂಗಳೂರು**




- ಲಲಿತಾ ಸಿದ್ಧಬಸವಯ್ಯ ಅವರ 'ರಖಾವು' ನೀಳ್ಗವನ ಮಾರ್ಮಿಕವಾಗಿದೆ. ವಿದೇಶಕ್ಕೆ ಹೊರಟು ನಿಂತ ಮಗನಿಗೆ ತಾಯಿಯ ವಾತ್ಸಲ್ಯಭರಿತ ಸಾಲುಗಳನ್ನು ಸರಳ ಪದಪುಂಜಗಳಲ್ಲಿ ಹಿಡಿದಿಡಲಾಗಿದೆ.

**ಕೆ.ಎಂ. ರುಕ್ಮಿಣಿ, ಬೆಂಗಳೂರು**

- ಕಥೆಗಳು, ಕವನಗಳು ಮತ್ತು ಪ್ರಬಂಧಗಳು ವೈವಿಧ್ಯಮಯವಾಗಿದ್ದು ಓದಿಸಿಕೊಂಡು ಹೋದವು. 'ಆಥರ್ಸ್ ಕಾಪಿ' ಲೇಖಕರ ತೊಳಲಾಟವನ್ನು ಮನಮುಟ್ಟುವಂತೆ ಬಿಂಬಿಸಿತು

**ಗಣಪತಿ. ಶಿ. ಗಲಗಲಿ. ಹುಲ್ಯಾಳ**

- ಮಾಧವಿಕುಟ್ಟಿ (ಕನ್ನಡಕ್ಕೆ: ತೇರ್‌ಳಿ ಎನ್.ಶೇಖರ್) ಅವರ ಅನುವಾದಿತ ಮಲೆಯಾಳಂ ಕವಿತೆಗಳು ಪುರುಷ ಸಮಾಜದ ಮಡಿ ಮೈಲಿಗೆಯ ಕಟ್ಟು ಕಳಚಿಕೊಂಡ ಹೆಣ್ಣೊಬ್ಬಳ ಭಾವಕೋಶವನ್ನು ಬಿಚ್ಚಿಟ್ಟಿದ್ದು, ನಿಜ ಮಾನವ ಜೀವಿಯ ಭಾವ ಭಿತ್ತಿಯ ಭಂಡಾರದಂತಿವೆ.

**ಶ್ರೀಧರ್, ಬೆಂಗಳೂರು**